# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **405** |
| **ಸದಸ್ಯರ ಹೆಸರು** | : | **ಡಾ: ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **10.03.2025** |
| **ಉತ್ತರಿಸುವ ಸಚಿವರು** | : | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| ಅ) | ಸರ್ಕಾರವು 1 ರಿಂದ 8ನೇ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಚಿಕ್ಕಿ ಪದಾರ್ಥದಿಂದ ಮಕ್ಕಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲಿಯವರೆಗೆ ಎಷ್ಟು ಮಕ್ಕಳಿಗೆ ಚಿಕ್ಕಿ ತಿನಿಸು ನೀಡಲಾಗಿದೆ; | ಬಂದಿದೆ.<br>ಸರ್ಕಾರದ ಆದೇಶ ಸಂಖ್ಯೆ: ಇಪಿ 99 ಎಂಎಂಎಸ್ 2024 ದಿನಾಂಕ: 17.02.225 ರನ್ವಯ ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಚಿಕ್ಕಿ ವಿತರಣೆಯನ್ನು ಸ್ಥಗಿತಗೊಳಿಸಿ, ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ವಿತರಿಸುವಂತೆ ತಿಳಿಸಲಾಗಿದೆ.<br>ಸದರಿ ಸರ್ಕಾರದ ಆದೇಶ ಹೊರಡಿಸುವ ಪೂರ್ವದಲ್ಲಿ 9,16,481 ಮಕ್ಕಳು ಚಿಕ್ಕಿಯನ್ನು ಸೇವಿಸಿರುತ್ತಾರೆ. |
| ಆ) | ಸರ್ಕಾರಿ ಶಾಲೆಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಬಿಸಿಯೂಟ ಕಾರ್ಯಕ್ರಮ ನೀಡಲಾಗುತ್ತಿದೆ; ಇದರಲ್ಲಿ ಎಷ್ಟು ಸಂಖ್ಯೆ ಮಕ್ಕಳಿಗೆ ಮೊಟ್ಟೆ ನೀಡಲಾಗುತ್ತಿದೆ; | ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿನ 40,64,226 ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದೆ.<br>ಇದರಲ್ಲಿ 24,64,371 ವಿದ್ಯಾರ್ಥಿಗಳು ಮೊಟ್ಟೆಯನ್ನು ಸೇವಿಸುತ್ತಿದ್ದಾರೆ. |
| ಇ) | ಬಾಳೆಹಣ್ಣು ಮತ್ತು ಮೊಟ್ಟೆ ಎರಡನ್ನು ಸೇವಿಸುವ ಮಕ್ಕಳ ಸಂಖ್ಯೆ ಎಷ್ಟು? | ಶಾಲೆಗಳಲ್ಲಿ ಒಂದು ದಿನಕ್ಕೆ ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಕೇವಲ ಮೊಟ್ಟೆ ಅಥವಾ ಬಾಳೆಹಣ್ಣನ್ನು ಮಾತ್ರ ಸೇವಿಸಲು ಅವಕಾಶವಿರುತ್ತದೆ. ಎರಡೂ ಪದಾರ್ಥಗಳನ್ನು ಸೇವಿಸಲು ಅವಕಾಶವಿರುವುದಿಲ್ಲ.<br>ಮೊಟ್ಟೆಯನ್ನು 24,64,371 ವಿದ್ಯಾರ್ಥಿಗಳು ಸೇವಿಸುತ್ತಿದ್ದರೆ, ಬಾಳೆ ಹಣ್ಣನ್ನು 6,44,671 ವಿದ್ಯಾರ್ಥಿಗಳು ಸೇವಿಸುತ್ತಿದ್ದಾರೆ. |

ಇಪಿ 24 ಎಂಎಂಎಸ್ 2025

**(ಎಸ್.ಮಧು ಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**